# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ–265/2018/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 03/03/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿಯ, ಗೋಪಾಲದೇವರಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಂಚೆ ಗ್ರಾಮದ ವಾಸಿಯಾದ ದೂರುದಾರರಿಗೆ ಸದರಿ ಗ್ರಾಮದಲ್ಲಿ ಪ್ರಧಾನ ಮಂತ್ರಿ ಆವಾಜ್ ಯೋಜನೆ (ಗ್ರಾಮೀಣ) ವಸತಿ ಯೋಜನೆಯಡಿ ವಾಸಿಸಲು ಯೋಗ್ಯ ಮನೆ ಮಂಜೂರು ಮಾಡಿ ಸೂರು ಕಲ್ಪಿಸಿಕೊಡುವುದರ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀಮತಿ ರೇಣುಕಾ ಕೋಂ ಮುದ್ದುರಾಜು.ಸಿ, ಬೆಂಚೆ ಗ್ರಾಮ, ಗೋಪಾಲದೇವರಹಳ್ಳಿ ಅಂಚೆ, ಬುಕ್ಕಪಟ್ಟಣ ಹೋಬಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ಎದುರುದಾರ ವಸತಿ ಯೋಜನೆಯಡಿಯಲ್ಲಿ ಮನೆ ಇರುವವರಿಗೆ ಅಕ್ರಮವಾಗಿ ಮನೆ ಮಂಜೂರು ಮಾಡುತ್ತಿದ್ದು, ತಮಗೆ ವಾಸಿಸಲು ಮನೆ ಇಲ್ಲದ ಕಾರಣ ಮನೆ ಮಂಜೂರು ಮಾಡುವಂತೆ ಕೋರಿದರೂ, ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ್ದಾರೆಂದು ಆಪಾದಿಸಿದ್ದಾರೆ.

3. ಎದುರುದಾರರು ದಿನಾಂಕ: 11/12/2018 ರಂದು ಪತ್ರ ಬರೆದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ: 04/10/2018 ರಂದು ಗ್ರಾಮಸ್ಥರ ಹಾಗೂ ಗ್ರಾಮ ಪಂಚಾಯತಿಯ

ಸಮಕ್ಷಮದಲ್ಲಿ ಗ್ರಾಮ ಮಹಜರ್ ಮಾಡಿ ಸರ್ವೆ ನಂ. 7/9ರಲ್ಲಿ ತಮ್ಮ ಸ್ವಂತ ಜಮೀನಿನ ಗುಡಿಸಿಲಿನಲ್ಲಿ ದೂರುದಾರರು ವಾಸವಿದ್ದಾರೆಂದು ಹಾಗೂ ಮನೆ ಮಂಜೂರು ಪಡೆಯಲು ಅವರು ಅರ್ಹರಾಗಿದ್ದಾರೆ. ಆದ್ದರಿಂದ, 2018–19ನೇ ಸಾಲಿನ ಯಾವುದಾದರೂ ಒಂದು ವಸತಿ ಯೋಜನೆಯಡಿಯಲ್ಲಿ ಗ್ರಾಮ ಸಭೆಯ ಮೂಲಕ ನಿಯಮಾನುಸಾರ ಮನೆ ಮಂಜೂರು ಮಾಡಲಾಗುವುದೆಂದು ವರದಿ ಸಲ್ಲಿಸಿದ್ದಾರೆ.

4. ಎದುರುದಾರರು ದಿನಾಂಕ: 11/12/2018 ರಂದು ಖಂಡಿಕೆ 26ರ ವಿಷಯವನ್ನು ವರದಿ ಮೂಲಕ ತಿಳಿಸಿದ್ದು, ಇಲ್ಲಿಯತನಕ ಯಾವ ಕ್ರಮ ಕೈಗೊಂಡಿದ್ದಾರೆ ಎನ್ನುವ ಬಗ್ಗೆ ಪತ್ರ ಬರೆದು ತಿಳಿಸಿಲ್ಲ. ದೂರುದಾರರು ಹಾಜರುಪಡಿಸಿರುವ ದಿನಾಂಕ: 04/10/2018ರ ಮಹಜರ್‌ನ್ನು ಪರಿಶೀಲಿಸಿದಾಗ, ಅದನ್ನು ಗ್ರಾಮಸ್ಥರ ಹಾಗೂ ಗ್ರಾಮ ಪಂಚಾಯತಿ ಸದಸ್ಯರ ಸಮಕ್ಷಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜರುಗಿಸಿದ್ದು, ಅದರಲ್ಲಿ ದೂರುದಾರರು ಬೆಂಚಯ್ಯ ಸರ್ವೆ ನಂ. 7/9ರ ತಮ್ಮ ಸ್ವಂತ ಜಮೀನಿನಲ್ಲಿ ಜಾಗವಿದ್ದು, ಅದೇ ಜಾಗದಲ್ಲಿ ವಸತಿ ಯೋಜನೆಯಡಿ ಮನೆ ಮಂಜೂರಾದರೆ ಕಟ್ಟಿಕೊಳ್ಳುತ್ತೇನೆ ಎಂದು ದೂರುದಾರರು ಒಪ್ಪಿಕೊಂಡಿದ್ದಾರೆ. ಹಾಲಿ ದೂರುದಾರರು ಗುಡಿಸಲಲ್ಲಿ ವಾಸವಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

5. ಎದುರುದಾರರು ತಮ್ಮ ವರದಿಯಲ್ಲಿ ದೂರುದಾರರು ವಸತಿ ಯೋಜನೆಯಡಿಯಲ್ಲಿ ಮನೆ ಮಂಜೂರಾತಿ ಪಡೆದುಕೊಳ್ಳಲು ಅರ್ಹರಾಗಿದ್ದಾರೆಂದು ಮತ್ತು 2018–19ನೇ ಸಾಲಿನ ಯಾವುದಾದರೊಂದು ವಸತಿ ಯೋಜನೆಯಡಿಯಲ್ಲಿ ಗ್ರಾಮ ಸಭೆಯ ಮೂಲಕ ನಿಯಮಾನುಸಾರ ದೂರುದಾರರನ್ನು ಆಯ್ಕೆ ಮಾಡಿ ಮನೆ ಮಂಜೂರು ಮಾಡಿಕೊಡಲಾಗುವುದು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

6. ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ದೂರುದಾರರಾದ ಶ್ರೀಮತಿ ರೇಣುಕಾ ಇವರು ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗೋಪಾಲದೇವರಹಳ್ಳಿ ಗ್ರಾಮ ಪಂಚಾಯತ್ ರವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಕಲಂ 227ರಡಿ ಕೆ.ಆರ್.ಪಿ. ನಂ. 10/2017–18 ನೇದ್ದನ್ನು ಸಲ್ಲಿಸಿ ಅದರಲ್ಲಿ, ಶಿರಾ ತಾಲ್ಲೂಕು ಬುಕ್ಕಾಪಟ್ಟನ ಹೋಬಳಿ, ಗೋಪಾಲದೇವರಹಳ್ಳಿ ಗ್ರಾಮ ಪಂಚಾಯತಿ ವಾರ್ಡ್ ಸಭೆಯಲ್ಲಿ ದಿನಾಂಕ: 21/09/2017ರ ತೀರ್ಮಾನವನ್ನು ಅಂಗೀಕರಿಸದೇ ಮತ್ತೊಮ್ಮೆ ಸ್ಥಳ ಪರಿಶೀಲನೆ ಮಾಡಿ

3 BD/265/2018/DRE-2

ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿರುವ ಮನೆಗಳ ಫಲಾನುಭವಿಗಳ ಹೆಸರಿಗೆ ಅರ್ಜಿದಾರರನ್ನು ಅಂದರೆ ದೂರುದಾರರ ಹೆಸರನ್ನು ಸೇರ್ಪಡೆ ಮಾಡಿಕೊಳ್ಳಬೇಕೆಂದು ಎದುರುದಾರರಿಗೆ ನಿರ್ದೇಶನ ಕೋರಿದ್ದಾರೆ.

7. ಅಂದರೆ ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿಗಳ ನ್ಯಾಯಾಲಯ, ತಾಲ್ಲೂಕು ಪಂಚಾಯತ್ ಶಿರಾ ಇವರಲ್ಲಿ ಕೆ.ಆರ್.ಪಿ. ನಂ. 10/2017ನ್ನು ದಿನಾಂಕ: 24/10/2017 ರಂದು ದಾಖಲಿಸಿದ್ದಾರೆ ಮತ್ತು ಅದರಲ್ಲಿ ಎದುರುದಾರರ ವಿರುದ್ಧ ನೋಟಿಸ್ ಜಾರಿಯಾಗಿ ಪ್ರಕರಣವು ವಿವಿಧ ದಿನಾಂಕಗಳಲ್ಲಿ ನಿಗಧಿಯಾಗಿದೆ ಎಂಬುದು ಕಂಡುಬರುತ್ತದೆ. ಆದರೆ, ಸದರಿ ಪ್ರಕರಣದಲ್ಲಿ ಯಾವ ನಿರ್ಣಯ ಆಗಿದೆ ಎಂಬುದನ್ನು ದೂರುದಾರರು ಸ್ಪಷ್ಟಪಡಿಸಿಲ್ಲ. ಆದರೆ, ಸದರಿ ಪ್ರಕರಣದಲ್ಲಿ ಸ್ಥಳ ಪರಿಶೀಲನೆ ಮಾಡಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿದ್ದರು ಸಹಿತ, ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಉಲ್ಲೇಖಿಸಿದ್ದಾರೆ.

8. ಎದುರುದಾರರು ತಾವು ಸಲ್ಲಿಸಿದ ವರದಿಯಲ್ಲಿ ದೂರುದಾರರಿಗೆ ಯಾವುದಾದರೂ ವಸತಿ ಯೋಜನೆಯಡಿಯಲ್ಲಿ ಗ್ರಾಮ ಸಭೆಯ ಮೂಲಕ ನಿಯಮಾನುಸಾರ ಆಯ್ಕೆ ಮಾಡಿ ಮನೆ ಮಂಜೂರು ಮಾಡಿಕೊಡಲಾಗುವುದೆಂದು ತಿಳಿಸಿದ್ದರು. ಈ ಸಂಬಂಧ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಿರಾ ಇವರಿಂದ ವರದಿ ಕೇಳಲಾಗಿ, ದಿನಾಂಕ: 10/12/2019 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಿರಾ, ರವರು ಪಿಡಿ.ಓ., ಗೋಪಾಲದೇವರಹಳ್ಳಿ ಗ್ರಾಮ ಪಂಚಾಯತ್ ರವರ ವರದಿ ಹಾಗೂ ದಾಖಲೆಗಳನ್ನು ತಮ್ಮ ವರದಿಯೊಂದಿಗೆ ಸಲ್ಲಿಸಿದ್ದಾರೆ.

9. ಸದರಿ ವರದಿಯನ್ನು ಪರಿಶೀಲಿಸಲಾಗಿ, ದೂರುದಾರರಿಗೆ ಗ್ರಾಮ ಪಂಚಾಯತ್‌ನಿಂದ 2019–20ನೇ ಸಾಲಿನ ಪ್ರಧಾನ ಮಂತ್ರಿ ಆವಾಜ್ ಯೋಜನೆ (ಗ್ರಾ) ವಸತಿ ಯೋಜನೆಯಡಿ ಕ್ರಮ ಸಂಖ್ಯೆ: 03ರಲ್ಲಿ ದಿನಾಂಕ: 29/06/2019 ರಂದು ಮನೆ ಮಂಜೂರು ಮಾಡಲಾಗಿದೆ ಅಂತಾ ಆ ಬಗ್ಗೆ ಕರಡು ಫಲಾನುಭವಿಗಳ ಪಟ್ಟಿಯ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಕರಡು ಫಲಾನುಭವಿಗಳ ಪಟ್ಟಿ ಕ್ರಮ ಸಂಖ್ಯೆ: 3ರಲ್ಲಿ ದೂರುದಾರರ ಹೆಸರು ಇರುವುದು ಕಂಡುಬರುತ್ತದೆ.

10. ದೂರುದಾರರಿಗೆ ಸದರಿ ವರದಿಯ ಪ್ರತಿ ಕಳುಹಿಸಿ ದೃಢೀಕರಣ ಕೇಳಲಾಗಿ, ದಿನಾಂಕ: 24/02/2020 ರಂದು ದೂರುದಾರರು ಪತ್ರ ಹಾಗೂ ದಾಖಲೆ ಕಳುಹಿಸಿದ್ದು, ಸದರಿ ಪತ್ರದಲ್ಲಿ ದಿನಾಂಕ: 29/06/2019 ರಂದು ಪ್ರಧಾನ ಮಂತ್ರಿ ಆವಾಜ್ ಯೋಜನೆಯ (ಗ್ರಾ) ವಸತಿ ಯೋಜನೆಯಡಿ ತನ್ನ ಹೆಸರನ್ನು ಆಯ್ಕೆ ಮಾಡಿದ್ದನ್ನು ಬಿಟ್ಟರೆ ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತ್‌ನಿಂದ ತಮಗೆ ಆದೇಶ ಪ್ರತಿ ದೊರೆತ್ತಿಲ್ಲ ಅಂತಾ ತಿಳಿಸಿದ್ದಾರೆ.

11. ದೂರುದಾರರು ಹಾಜರುಪಡಿಸಿರುವ ಗ್ರಾಮ ಪಂಚಾಯತ್, ಗೋಪಾಲದೇವರಹಳ್ಳಿ, ಶಿರಾ ತಾಲ್ಲೂಕು ವಸತಿ ರಹಿತರ ಆದ್ಯತಾ ಪಟ್ಟಿಯನ್ನು ಪರಿಶೀಲಿಸಲಾಗಿ, ಕ್ರಮ ಸಂಖ್ಯೆ: 152ರಲ್ಲಿ ದೂರುದಾರರ ಹೆಸರು ಇರುವುದು ಕಂಡುಬರುತ್ತದೆ. ಇದನ್ನು ಹೊರತುಪಡಿಸಿದರೆ ದೂರುದಾರರಿಗೆ ಯಾವುದೇ ರೀತಿಯ ಸೌಲಭ್ಯ ಕೈಗೆ ಸಿಕ್ಕಿಲ್ಲ ಎಂಬುದು ಲಭ್ಯವಿರುವ ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ತನಗೆ ವಾಸಿಸಲು ಮನೆ ಇಲ್ಲ ಅಂತಾ ದೂರಿನಲ್ಲಿ ಉಲ್ಲೇಖಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

12. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಶಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿಯ, ಗೋಪಾಲದೇವರಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಂಚೆ ಗ್ರಾಮದ ವಾಸಿಯಾದ ದೂರುದಾರರಿಗೆ ಸದರಿ ಗ್ರಾಮದಲ್ಲಿ ಪ್ರಧಾನ ಮಂತ್ರಿ ಆವಾಜ್ ಯೋಜನೆ (ಗ್ರಾಮೀಣ) ವಸತಿ ಯೋಜನೆಯಡಿ ವಾಸಿಸಲು ಯೋಗ್ಯ ಮನೆ ಮಂಜೂರು ಮಾಡಿ ಸೂರು ಕಲ್ಪಿಸಿಕೊಡಬೇಕೆಂದು ನಿರ್ದೇಶಿಸಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4/3/20

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**